# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೈದನೆಯ ಅಧಿವೇಶನ

## ಕಾರ್ಯಕಲಾಪಗಳ ಪಟ್ಟಿ

**ಶುಕ್ರವಾರ, ದಿನಾಂಕ: 11ನೇ ಜುಲೈ, 2014**

**(ಸಮಯ: ಬೆಳಗ್ಗೆ 10.30 ಗಂಟೆಗೆ)**

******

### 01. ಪ್ರಶ್ನೋತ್ತರ

**ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು** : **ಹದಿನೈದನೆಯ ಪಟ್ಟಿ**

**ಆ) ತಡೆಹಿಡಿಯಲಾದ ಪ್ರಶ್ನೆ:**

(1) 10 ನೇ ಪಟ್ಟಿಯಿಂದ ತಡೆಹಿಡಿಯಲಾದ ಶ್ರೀ ಸೋಮಣ್ಣ ಮ. ಬೇವಿನಮರದ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 150(697)
(2)14 ನೇ ಪಟ್ಟಿಯಿಂದ ತಡೆಹಿಡಿಯಲಾದ ಶ್ರೀ ಡಿ.ಎಸ್. ವೀರಯ್ಯ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 210(1161)
} **ಮಾನ್ಯ ವಸತಿ ಸಚಿವರು**

**ಇ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು** : **ಹದಿನೈದನೆಯ ಪಟ್ಟಿ**

### 02. ವರದಿಯನ್ನೊಪ್ಪಿಸುವುದು

**ಶ್ರೀಮತಿ ತಾರಾಅನೂರಾಧ (ಸದಸ್ಯರು, ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ)** ಅವರು ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 27ನೇ ಹಾಗೂ 28ನೇ ವರದಿಗಳನ್ನು ಒಪ್ಪಿಸುವುದು.

### 03. ಮಕ್ಕಳ ಹಕ್ಕುಗಳ ರಕ್ಷಣೆ ಕುರಿತು ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ

### 04. ಗಮನ ಸೆಳೆಯುವ ಸೂಚನೆಗಳು

**ಅ) ಶ್ರೀಯುತರುಗಳಾದ: ಬಸವರಾಜ ಹೊರಟ್ಟಿ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಮರಿತಿಬ್ಬೇಗೌಡ, ಪುಟ್ಟಣ್ಣ ಹಾಗೂ ಅರುಣ ಶಹಾಪುರ** ಅವರುಗಳು ಕಾಲೇಜು ಶಿಕ್ಷಣ ಇಲಾಖೆ ಸುತ್ತೋಲೆಯನ್ನು ಹೊರಡಿಸಿ, ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿರುವ ಸೇವಾವಧಿಯನ್ನು ಪರಿಗಣಿಸಿ ವೇತನ, ಪಿಂಚಣಿ ಹಾಗೂ ಇತರೆ ಸೇವಾ ಸೌಲಭ್ಯಗಳನ್ನು ಮಂಜೂರು ಮಾಡದಿರುವ ಬಗ್ಗೆ **ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ** ಗಮನ ಸೆಳೆಯುವುದು.

**ಆ) ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ** ಅವರು ರಾಜ್ಯದ ರೈತರಿಗೆ ಬೆಳೆ ವಿಮಾ ಸಾಲದ ವಿಷಯದಲ್ಲಿ ಅನುಕೂಲ ಮಾಡಿರುವ ಸರ್ಕಾರ ಉತ್ತರ ಕನ್ನಡ ಜಿಲ್ಲೆಗೆ ತಾರತಮ್ಯ ಮಾಡಿರುವ ಬಗ್ಗೆ **ಮಾನ್ಯ ಕೃಷಿ ರಾಜ್ಯ ಸಚಿವರ** ಗಮನ ಸೆಳೆಯುವುದು.

**ವಿ. ಶ್ರೀಶ್**
**ಕಾರ್ಯದರ್ಶಿ**

---